2. ಖರೀದಿ ಮಾಬಲಗು ಪೈಕಿ ವುಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪುದಲ್ಲಿ ಇದಕ್ಕೆ ಸೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೀರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮಾರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡೆದಿರುವ ಚಾವುಬೀನಾ ಕಿಮ್ಮತ್ತು ಪ್ರಾರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚಾವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾನನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಬಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಸ್ಯ 1907ನೆ ಇಸವಿ ಸೆಪಟಂಬರ್ ತಾರೀಖು 23ರಲ್ಲು ನಡದ ಡಿಸ್ಟ್ರಿಕ್ಟ್ ಬೋರ್ಡ್ ಮಿಟಿಂಗಿನಲ್ಲಿ ಆದ ತೀರ್ಮಾನಗಳು.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರ್, ಬಿ.ಎ., ಬಿ.ಎಲ್., ಪ್ರೆಸಿಡೆಂಟರು.
2. ,, ಬಿ. ವೆಂಕೋಬರಾವ್, ಬಿ.ಎ. ವೈಸ್ ಪ್ರಸಿಡೆಂಟರು.
3. ,, ಕೆ. ಶ್ರೀನಿವಾಸರಾಮರು, ಮಾಲೂರು ಡಿವೀಜ್ ಅಸಿಸ್ಟೆಂಟ್ ಕಮಿಷನರು.
4. ,, ಜಿ. ಆರಾವಮುದ್ದೈಯ್ಯಂಗಾರ್, ಬಿ.ಎ., ಬಿ.ಎಲ್., ಚಿಕ್ಕಬಳ್ಳಾಪುರ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರು.
5. ,, ಕೆ. ಕೃಷ್ಣಯ್ಯಂಗಾರ್ರವರು, ಎಗ್ಸಿಕ್ಯೂಟಿವ್ ಇಂಜನಿಯರ್.
6. ,, ಎಸ್. ಗೋಪಾಲರಾವ್, ಸ್ಕೂಲುಗಳ ಡಿಪ್ಯೂಟಿ ಇನ್ಸ್ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಜ್ (ಡಿ)

1. ಮೆ॥ ಮುನಿನಾರಣಯ್ಯ ಶೆಟ್ಟರವರು.
2. ,, ರಾಮರಾಯರವರು, ಮಾಲೂರು.
3. ,, ದೊಂತಿ ಚಿಕ್ಕಸುಬ್ಬಾಯಪ್ಪನವರು, ಶಿಡ್ಲಘಟ್ಟ.
4. ,, ಎಂ. ಚೌಡರಡ್ಡಿಯವರು, ಚಿಂತಾಮಣಿ.
5. ,, ಉಮ್ಮಂಗೈಯ್ಯನವರು, ಬವರಿಂಗಪೇಟೆ.
6. ,, ಕಾಸ್ಟಿ ಹೈದರಿಸಾಹೇಬರವರು, ಮುಳಬಾಗಲು.
7. ,, ಲಕ್ಷ್ಮಣರಾಯರವರು, ಗುಡಿಬಂಡೆ.
8. ,, ರಾಮಣ್ಣನವರು, ಗೋರಿಬಿದನೂರು.
9. ,, ನಾರಾಯಣಸಾಮಿಶೆಟ್ಟರು, ಚಿಕ್ಕಬಳ್ಳಾಪುರ.
10. ,, ಪಿ. ತಿಮಪ್ಪನವರು, ಬಾಗೇಪಲ್ಲಿ.

ಕ್ಲಾಸ್ (ಇ)

11. ಮೆ॥ ಬಸವೇಗೌಡರವರು, ಬವರಿಂಗಪೇಟೆ.
12. ,, ವೆಂಕಟಸಾಮಿರಡ್ಡಿಯವರು, ಶ್ರೀನಿವಾಸಪುರ.
13. ,, ಅಪ್ಪಾಜಿರಡ್ಡಿಯವರು, ಚಿಂತಾಮಣಿ.
14. ,, ಗೌಡಗೆರೆ ಕೃಷ್ಣಾಚಾರ್ರು, ಗೋರೀಬಿದನೂರು.

ಗೈರ್ ಹಾಜರು.

ಎಕ್ಸ್ ಅಫಿಷಿಯೊ ಮೆಂಬರು.

ಮೆ॥ ಹನುಮಾನ್ ಸಿಂಗ್, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.

ನ್ಯಾ ಅಫಿಷಿಯಲ್ ಮೆಂಬರುಗಳು.

ಕ್ಲಾಸು (ಡಿ)

1. ವೆ॥ ಮಹಮದ್ ಹುಸೇನ್ ಸಾಹೇಬರವರು, ಶ್ರೀನಿವಾಸಪುರ.
2. ,, ಕೆ. ಶ್ರೀನಿವಾಸಾಚಾರ್ಯರವರು, ಶಿಡ್ಲಘಟ್ಟ.

ಕ್ಲಾಸು (ಇ)

3. ,, ಬಾಗೇಪಲ್ಲಿ ವೆಂಕಟರಡ್ಡಿಯವರು.

ಈ ಕೆಳಗೆ ನಮೂದಿಸಿರುವ ಅಮಲ್ದಾರ್ರುಗಳೂ ಮತ್ತು ಡೆಪ್ಯುಟಿ ಅಮಲ್ದಾರ್ರು ಸಹ ಹಾಜರಿದ್ದರು.

1. ಮಿ॥ ಸಿ. ವಿ. ನಾರಾಯಣರಾಯರವರು, ಕೋಲಾರ ತಾಲ್ಲೂಕು ಅಮಲ್ದಾರ್ರು.
2. ,, ಎಂ. ಬಬೇದುಲ್ಲ, ಬೌರಿಂಗ್‌ಪೇಟೆ ತಾಲ್ಲೂಕು ಅಮಲ್ದಾರ್ರು.
3. ,, ವೈ. ನರಸಿಂಗರಾಯರು, ಶ್ರೀನಿವಾಸಪುರ ತಾಲ್ಲೂಕು ಅಮಲ್ದಾರ್ರು.
4. ,, ಎಂ. ಎಸ್. ಪುಟ್ಟಣ್ಣನವರು, ಮುಳಬಾಗಿಲ್ ತಾಲ್ಲೂಕು ಅಮಲ್ದಾರ್ರು.
5. ,, ಜಿ. ನಾರಾಯಣರಾಯರು, ಶಿಡ್ಲಘಟ್ಟ ತಾಲ್ಲೂಕು ಅಮಲ್ದಾರ್ರು.
6. ,, ಆರ್. ಶ್ಯಾಮರಾಯರು, ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್ದಾರ್ರು.
7. ,, ಕೆ. ಹನುಮಂತರಾವ್, ಗೋರಿಬಿದನೂರು ತಾಲ್ಲೂಕು ಅಮಲ್ದಾರ್ರು.
8. ,, ವಿ. ಗೋಪಾಲರಾವ್, ಬಾಗೇಪಲ್ಲಿ ತಾಲ್ಲೂಕು ಅಮಲ್ದಾರ್ರು.
9. ,, ಕೆ. ವೆಂಕಟಸ್ವಾಮಿ ಐಯ್ಯರ್, ಮಾಲೂರು ತಾಲ್ಲೂಕು ಅಮಲ್ದಾರ್ರು.
10. ,, ಅನಂತರಾಮ್ಮಯ್ಯಂಗಾರ್, ಗುಡಿಬಂಡೆ ಡೆಪ್ಯುಟಿ ಅಮಲ್ದಾರ್ರು.

(1) ಕಳೆದ ಮೀಟಿಂಗ್ ಪ್ರೊಸೀಡಿಂಗ್ಸನ್ನು ಓದಿ ನಿರ್ಧರಿಸಲ್ಪಟ್ಟಿತು.

(2) ಕಂಟ್ರೋಲರ್ ಸಾಹೇಬರವರಿಂದ ಆಡಿಟ್ಟಿಗಿ ಬಂದ 1907ನೆ-ಮೇ, ಮತ್ತು ಜೂನ್ ಮಾಹೆಗಳ ಲೆಖ್ಖಗಳು ಓದಿ ರಿಕಾರ್ಡು ಮಾಡಲ್ಪಟ್ಟಿತು.

(3) ದಸರಾ ಪ್ರಜಾಪ್ರತಿನಿಧಿ ಸಭೆಯ ಮೆಂಬರಾದ ಗಾಡಿಗರ ಕೃಷ್ಣಾಚಾರ್ಯರಿಂದ ತರಲ್ಪಟ್ಟ ಗೋರಿಬಿದನೂರು ತಾಲ್ಲೂಕು ಮಂಚೇನಹಳ್ಳಿಯಿಂದ ತೊಂಡೇಭಾವಿ ವರಿಗೆ ಬಂದು ರಸ್ತೆಯು ಅವಶ್ಯಕವಾಗಿರುವುದೆಂಬುವ ವಿಷಯವು ಚರ್ಚಿಸಲ್ಪಟ್ಟಿತು.

ಈ ರಸ್ತೆಯನ್ನು ಹಾಕುವದು ಸಾಧ್ಯವೇ ಮತ್ತು ಈ ಸಾಲಿನ ಬಜೆಟ್ಟಿನಲ್ಲಿ ಕೇರಿಸಿರುವ 1,000 ರೂಪಾಯಿಗಳನ್ನು ಯಾವ ವಿಧವಾಗಿ ಸರಿಯಾಗಿ ಉಪಯೋಗಿಸಬಹುದೊ ಎಂಬುವದಕ್ಕೂ ಅಜನವಾಯಿಷಿಯಿಂದ ರಿಪೋರ್ಟು ಮಾಡಬೇಕೆಂದು ಕೋಲಾರ ಡಿವೀಜ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರಿಗೆ ಬರಿಸಬಹುದೆಂದು ತೀರ್ಮಾನಿಸಲ್ಪಟ್ಟಿತು.

(4) ಸದರಿ ವೇಲ್ಕಂಡ ಕೃಷ್ಣಾಚಾರ್ಯರಿಂದ ತರಲ್ಪಟ್ಟ ಹತ್ತು ವರ್ಷಗಳ ಕೆಳಗೆ 1,000 ರೂಪಾಯಿ ಲಾಗುವಡು ಖರ್ಚು ಮಾಡಿ ದುರಸ್ತು ಮಾಡಿರುವ ವಾಟದ ಹೊಸಳ್ಳಿಯ ಮಾರ್ಗವಾಗಿ ಬಾಗೇಪಲ್ಲಿಯಿಂದ ಗೋರಿಬಿದನೂರಿಗೆ ಹೋಗುವ ರಸ್ತೆಯನ್ನು ಪಬ್ಲಿಕ್ ಇಲಾಖೆಯಿಂದ ದುರಸ್ತು ಮಾಡಿಸಬೇಕೆಂಬುವ ವಿಷಯವನ್ನು ಚರ್ಚಿಸಲ್ಪಟ್ಟಿತು.

ಇದನ್ನು ಅಜನವಾಯಿಷಿಯಿಂದ ಇದು ಆಗಬಹುದೆ ಇಲ್ಲವೆ ಎಂಬುವದಕ್ಕೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಕೋಲಾರ ಡಿವೀಜ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರಿಗೆ ಬರಿಸಬಹುದೆಂದು ನಿರ್ಧರಿಸಲ್ಪಟ್ಟಿತು.

(5) ಸ್ಯ 1906—07ನೆ ಸಾಲಿನ ಡಿಸ್ಟ್ರಿಕ್ಟ್ ಫಂಡು ಆಡಳಿತದ ರಿಪೋರ್ಟನ್ನು ಓದಿ ಒಪ್ಪಲಾಯಿತು.

(6) ಈ ಕೆಳಗೆ ನಮೂದಿಸಿರುವ ತಾಲ್ಲೂಕು ಬೋರ್ಡು ಮೀಟಿಂಗುಗಳ ತೀರ್ಮಾನಗಳನ್ನು ನಿರ್ಧರಿಸಲ್ಪಟ್ಟಿತು.

ತಾಲ್ಲೂಕು.	ತಾರೀಖು.
ಶ್ರೀನಿವಾಸಪುರ	14—8—1907
ಮುಳಬಾಗಿಲ್	15—8—1907
ಶಿಡ್ಲಘಟ್ಟ	15—8—1907
ಗೋರಿಬಿದನೂರು	21—8—1907
ಬಾಗೇಪಲ್ಲಿ	27—8—1907

(7) ಮುಂದಿನ ಮೀಟಿಂಗ್ ಸ್ಯ 1907ನೆ ಇಸವಿ ಡಿಸೆಂಬರ್ ಮಾಹೆ 7ನೆ ತಾರೀಖಿನಲ್ಲಿ ನಡಿಸಬಹುದೆಂದು ನಿಶ್ಚಯಿಸಲ್ಪಟ್ಟಿತು.

ಬಿ. ವೆಂಕೋಬರಾವ್,
ಛಾರ್ ಪ್ರೆಸಿಡೆಂಟ್.